ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಪ್ರಸ್ತಾಪದ ಅಂಗೀಕಾರ

ಶ್ರೀ ಧರ್ಮಸಿಂಗ್ :- (ಕಂದಾಯ ಮಂತ್ರಿಗಳು) : ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1994 ರ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾಪವೇನೆಂದರೆ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1994 ರ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

6.30 ಪಿ.ಎಂ.

1994 ರ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್.ಎಂ.ರೇವಣ್ಣ (ಕೃಷಿ ಸಚಿವರು) :- ಮಾನ್ಯ ಅಧ್ಯಕ್ಷರೇ ''1994 ರ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ.ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ನಮಗೆ ಇದರ ಬಗ್ಗೆ ಸಂಪೂರ್ಣ ಸ್ವಾಗತ ಇದೆ. ಈ ಮಸೂದೆಯನ್ನು ತಂದಿರುವುದಕ್ಕೆ ನಾನು ಅಭಿನಂದಿಸುತ್ತೇನೆ.

ಶ್ರೀ ಸಿ.ಬೈರೇಗೌಡ :- ನಿಯಮಾವಳಿ ಪ್ರಕಾರ ಅವರ ಸೇಲಿಯೆಂಟ್ ಫೀಚರ್ಸ್‌ನ್ನು ಹೇಳಬೇಕಾಗುತ್ತದೆ. ದಯವಿಟ್ಟು ಹೇಳಿ.

ಶ್ರೀ ಎಲ್ ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ನಾವು ಇದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ :- ಮಾನ್ಯ ಅಧ್ಯಕ್ಷರೇ, ಇವರು ಬಯಲು ಸೀಮೆ ಪ್ರಾಧಿಕಾರದ ವಿಧೇಯಕವನ್ನು ಏನು ಮಂಡಿಸಿದ್ದಾರೆ.....

ಅಧ್ಯಕ್ಷರು : - ಇನ್ನು ಅದರ ಬಗ್ಗೆ ವಿವರಣೆಯನ್ನೇ ನೀಡಿಲ್ಲ.

ಶ್ರೀ ಜೆ. ಪುಟ್ಟಸ್ವಾಮಿಗೌಡ :- ಮಂಡಿಸುವುದಕ್ಕೆ ಅವರು ಫರ್ಮಿಷನ್‌ನ್ನು ಕೇಳಿದ್ದಾರೆ. ಮಂಡಿಸುವುದಕ್ಕೇ ನನ್ನ ವಿರೋಧ ಇದೆ ಎಂದು ನಾನು ಹೇಳುತ್ತಿರುವುದು.

ಅಧ್ಯಕ್ಷರು :- ನಿಮ್ಮದು ವಿರೋಧ ಇದೆಯೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ :- ಮಂಡಿಸುವುದಕ್ಕೆ ನನ್ನ ವಿರೋಧ ಇದೆ ಎಂದು ಹೇಳುವುದು. ನನಗೆ ದಯವಿಟ್ಟು ಎರಡು ನಿಮಿಷ ಅವಕಾಶವನ್ನು ಕೊಡಿ.

ಅಧ್ಯಕ್ಷರು :- ಏನು ವಿರೋಧ? ಇದಕ್ಕೆ.

ಶ್ರೀ ಸಿ.ಬೈರೇಗೌಡ :- ಆಗಲೇ ಮಂಡಿಸಿ ಆಗಿದೆ. ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡುವುದಕ್ಕೆ ನಿಂತಿದ್ದಾರೆ. ಈ ಹಂತದಲ್ಲಿ ಮಂಡಿಸುವುದಕ್ಕೆ ವಿರೋಧ ಏನು ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜೆ. ಪುಟ್ಟಸ್ವಾಮಿಗೌಡ :- ನಮ್ಮ ಅನಿಸಿಕೆ ಏನು ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಈಗಾಗಲೇ ಮಂಡಿಸಿದ್ದಾರೆ. ವಿರೋಧ ಏಕೆ?

ಶ್ರೀ ಎಂ.ನಾರಾಯಣಸ್ವಾಮಿ :- ಈಗಾಗಲೇ ಮಂಡಿಸಿರುವುದರಿಂದ ಆ ವಿಷಯ ಬರುವುದಿಲ್ಲ.

ಶ್ರೀ ಎಲ್. ಆರ್.ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ಮಂಡಿಸಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಅದರಲ್ಲಿರತಕ್ಕಂಥ ಲೋಪದೋಷಗಳನ್ನು ಹೇಳಬೇಕಾಗುತ್ತದೆ. ಅದನ್ನು ಹೇಳುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಹೇಳಲಿ.

ಶ್ರೀ ಹೆಚ್.ಎಂ.ರೇವಣ್ಣ :- (ಕೃಷಿ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕಡಿಮೆ ಮಳೆ ಬೀಳತಕ್ಕಂಥ ಪ್ರದೇಶಗಳಲ್ಲಿ ಅಲ್ಲಿಯ ರೈತರ ಕಾರ್ಯಕ್ರಮಗಳಾದಂಥ ನೀರಾವರಿ ಅಭಿವೃದ್ಧಿ ಮತ್ತು ನೀರಾವರಿ ಉಪಯೋಗಕ್ಕೆ ಮತ್ತು ಎಲ್ಲಿ ಕಡಿಮೆ ಮಳೆ ಶೇಕಡ 30ಕ್ಕಿಂತ ಕಡಿಮೆ ಮಳೆ ಬೀಳುವ ಜಾಗ ಮತ್ತು ನೀರಾವರಿ ಜಿಲ್ಲೆಗಳನ್ನು ಹೊರತು ಪಡಿಸಿ ಜಿಲ್ಲೆಗಳಾದ ಕೋಲಾರ, ಬೆಂಗಳೂರು ಗ್ರಾಮಾಂತರ ಚಿತ್ರದುರ್ಗ ತುಮಕೂರು ಹಾಗೂ ಬೆಳಗಾಂ ಜಿಲ್ಲೆಗಳ ಹಾಗೂ ಧಾರವಾಡದ ಕೆಲವು ತಾಲ್ಲೂಕುಗಳು ಹೀಗೆ ಒಟ್ಟು ಹೀಗೆ ತಾಲ್ಲೂಕುಗಳಲ್ಲಿ ಈ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಲು ಕಾರ್ಯವನ್ನು ಹಾಕಿದ್ದೇವೆ. ಈ ಒಂದು ಒಣಭೂಮಿ ಅಭಿವೃದ್ಧಿ ಮಂಡಲಿ ಏರಿಯಾ ಪ್ರೋಗ್ರಾಮ್‌ಗಳು ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ಗಳು ಒಂದೇ ಕಡೆ ಕೆಲಸ ಮಾಡಿ ಎಲ್ಲಾ ಕಾರ್ಯಕ್ರಮಗಳನ್ನು ಕೂಡ ಒಟ್ಟುಗೂಡಿಸಿ ಈ ಒಂದು ಮಂಡಳಿಯನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಎರಡನೆಯದಾಗಿ ಈ ಒಂದು ಬಯಲು ಸೀಮೆಪ್ರದೇಶದಲ್ಲಿ ಭೂಸಾರ ಮತ್ತು ನೀರಿನ ಸಂರಕ್ಷಣೆ ಮಾಡುವ ದೃಷ್ಟಿಯಿಂದ ನಮ್ಮ ಒಣಭೂಮಿ ಅಲ್ಲಿ ಇರುವ ಕಾರ್ಯಕ್ರಮಗಳನ್ನು ಇದಕ್ಕೆ ಸೇರಿಸಿಕೊಂಡು ಇಲ್ಲಿಯ ಅರಣ್ಯಸಂಪತ್ತು ಕಡಿಮೆ ಇರುವುದು ಮತ್ತು ಪಶುಸಂಗೋಪನೆ,

ತೋಟಗಾರಿಕೆ ಇವುಗಳಿಗೆ ಹೆಚ್ಚಿನ ಗಮನವನ್ನು ಹರಿಸಿ ಇದನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಈ ಒಂದು ಮಂಡಳಿಯನ್ನು ಅಸ್ತಿತ್ವಕ್ಕೆ ತರುತ್ತಿದ್ದೇವೆ. ಇದರಲ್ಲಿ ನಮ್ಮ ಹಿರಿಯ ಸದಸ್ಯರಾದಂಥ ಪುಟ್ಟಸ್ವಾಮಿಗೌಡರು ಏನು ಅವರ ಊರಿನ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ, ನಾನು ಅವರಿಗೆ ಮತ್ತೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ಅವರ ತಾಲ್ಲೂಕು 30 ಪರ್‌ಸೆಂಟ್‌ವರೆಗೆ ಇರಿಗೇಷನ್‌ಗೆ ಒಳಪಡತಕ್ಕಂಥ ಪರಿಸ್ಥಿತಿಯಲ್ಲಿದೆ. ಅದರಿಂದಾಗಿ ಅವರ ಒಂದು ತಾಲ್ಲೂಕು ಸೇರಿಲ್ಲ.

ಡಾ॥ ಎನ್.ಬಿ.ನಂಜಪ್ಪ :- ಚನ್ನರಾಯಪಟ್ಟಣದಲ್ಲಿ 30 ಪರ್‌ಸೆಂಟ್ ಇಲ್ಲ. ಆದರೂ ಸಹ ಅದನ್ನು ಬಿಟ್ಟಿದ್ದೀರಿ. ಚನ್ನರಾಯಪಟ್ಟಣದಲ್ಲಿ ಆರು ಹೋಬಳಿಗಳಲ್ಲಿ ಕಂಪ್ಲೀಟ್ ಆಗಿ ಡ್ರೈ ರೈನ್ ಪ್ಯಾಡೋ ಏರಿಯಾ ಏನಿದೆ ಅದನ್ನು ಎಕ್ಸ್‌ಕ್ಲೂಡ್ ಮಾಡಿದ್ದೀರಿ. ಇದು ಪೋಸ್ಟ್ ಅನ್‌ಸೈಂಟಿಫಿಕ್ ಆಗಿದೆ.

ಶ್ರೀ ಹೆಚ್.ಎಂ.ರೇವಣ್ಣ :- ನಾವು ಏನು ನಾರ್ಮ್ಸ್ ಹಾಕಿದ್ದೇವೆ ಅಂದರೆ, ಮಳೆಯ ಸರಾಸರಿ 750 ಮಿಲಿ ಮೀಟರ್ ಎಲ್ಲಿ ಮಳೆ ಬೀಳುವುದಿಲ್ಲ, 750 ಮಿಲಿ ಮೀಟರ್ ಮಳೆ ಮತ್ತು ನೀರಾವರಿ ಪ್ರದೇಶ 30 ಭಾಗ ಎಲ್ಲಿ ಒಳಪಡುವುದಿಲ್ಲ, ಅಂಥ ತಾಲ್ಲೂಕುಗಳನ್ನು ನಾವು ಇಲ್ಲಿ ಆಯ್ಕೆ ಮಾಡಿಕೊಂಡಿದ್ದೇವೆ. ಇದರಲ್ಲಿ ವ್ಯತ್ಯಾಸವಿದೆ ಎನ್ನುವುದಾದರೆ ತಾವು ತಿಳಿಸಿ. ನಾವು ಅದನ್ನು ಪರಿಶೀಲಿಸುತ್ತೇವೆ. ಅದಲ್ಲದೆ ನೇರವಾಗಿ ಈ ವಿಧೇಯಕವನ್ನು ಒಪ್ಪುವುದಿಲ್ಲ ಎಂದು ಹೇಳಿದರೆ ಹೇಗೆ? ಈಗ ಈ ವಿಧೇಯಕ ಮಂಡನೆಯಾಗಿದೆ. ಇದಕ್ಕೆ ಸಭೆಯು ಒಪ್ಪಿಗೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ವ್ಯವಸಾಯ ಮಂತ್ರಿಗಳು ಏನು ಈ ಬಿಲ್ಲನ್ನು ಮಂಡನೆ ಮಾಡಿದ್ದಾರೆ, ಇದನ್ನು ಹೃತ್ಪೂರ್ವಕವಾಗಿ ನಾನು ಸ್ವಾಗತಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ತೀರ್ಥಹಳ್ಳಿ) :- ಇದನ್ನು ಸಂಪೂರ್ಣವಾಗಿ ನಾವು ಏಕಮನಸ್ಸಿನಿಂದ ಸ್ವಾಗತ ಮಾಡುತ್ತೇನೆ.

* ಶ್ರೀ ಸಿ.ಭೈರೇಗೌಡ :-ನಿಮ್ಮ ಔದಾರ್ಯಕ್ಕೆ ನಾನು ಚಿರಋಣಿ. ಬಹಳ ದಿನಗಳಿಂದ ಈ ಬಯಲುಸೀಮೆಯಿಂದ ಬಂದಿರತಕ್ಕಂಥ ಈ ಸಭೆಯ ಎಲ್ಲಾ ಪಕ್ಷದ ಶಾಸಕರು ಮತ್ತು ವಿಧಾನಪರಿಷತ್ತಿನಲ್ಲಿರತಕ್ಕಂಥ ಮಾನ್ಯ ಸದಸ್ಯರುಗಳು ಬಹಳ ತೀವ್ರವಾದಂಥ ಒತ್ತಾಯವನ್ನು ಇದಕ್ಕಾಗಿ ಸರ್ಕಾರದ ಮೇಲೆ ಮಾಡುತ್ತಿದ್ದರು. ಇದು ಬಹಳ ವರ್ಷಗಳ ಹಳೆಯದು. ಇದು ನಿನ್ನೆ ಮೊನ್ನೆಯದಲ್ಲ. ಹತ್ತಾರು ವರ್ಷಗಳಿಂದ ಈ ಜನತಾ ಪ್ರತಿನಿಧಿಗಳ ಒತ್ತಾಯ ಇತ್ತು. ಆ ಒತ್ತಾಯಕ್ಕೆ ಮಣಿದು ಇವತ್ತಿನ ದಿವಸ ಕೊನೆಯ ಅವಧಿಯಲ್ಲಿ ಅಂದರೆ ನಮ್ಮ ಅವಧಿಯ ಕೊನೆಯ ಅವಧಿಯಲ್ಲಿ ಅಂದರೆ ನಮ್ಮ ಅವಧಿಯ ಕೊನೆಯ ದಿವಸವಾದರೂ ಕೂಡ ಇಂಥ ಒಂದು ಉಪಯುಕ್ತವಾದಂಥ ಒಂದು ಕಾನೂನನ್ನು ತರುವುದಕ್ಕೆ ಸರ್ಕಾರ ಮುಂದೆ ಬಂದಿದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಇದರಲ್ಲಿ ಏನಿದೆ ಎಂದು ಎರಡು - ಮೂರು ಸಾರಿ ಇದನ್ನೆಲ್ಲ

ಓದಿ ನೋಡಿದ್ದೇನೆ. ನನಗೆ ತೋಚಿದ್ದು ಏನೆಂದರೆ ಈ ಮಂಡಲಿಯ ಅಧ್ಯಕ್ಷರಾಗಿರುವವರಿಗೆ ಇದರಲ್ಲಿ ಏನೂ ಕೂಡ ಅಧಿಕಾರವಿಲ್ಲ. ಅವರು ಸಭೆಯನ್ನು ಕರೆಯಬಹುದು, ವಿಶೇಷವಾದ ಸಭೆಯನ್ನು ಕರೆಯಬಹುದು ಮತ್ತು ಇಂಥ ಕಡೆ ಸಭೆ ನಡೆಯಬಹುದು ಎಂದು ನಿರ್ದೇಶನ ಮಾಡಬಹುದು. ಮತ್ತು ಆ ಸಭೆಯಲ್ಲಿ ಅವರು ಅಧ್ಯಕ್ಷತೆಯನ್ನು ವಹಿಸಬಹುದು. ಇಷ್ಟು ಬಿಟ್ಟರೆ ಬೇರೆ ಏನೂ ಅವರಿಗೆ ಅಧಿಕಾರವಿಲ್ಲ. ಮತ್ತೆ ಇದಕ್ಕೆ ಒಂದು ಇಂಪ್ಲಿಮೆಂಟೇಷನ್ ಕಮಿಟಿ ಎಂದು ಕೂಡ ಮಾಡಿದ್ದಾರೆ. ಆ ಇಂಪ್ಲಿಮೆಂಟೇಷನ್ ಸಮಿತಿಯಲ್ಲೂ ಸಹಾ ಬರೀ ಅಧಿಕಾರಿಗಳನ್ನು ತುಂಬಿರುವುದನ್ನು ನಾವು ನೋಡಿದ್ದೇವೆ. ಇದು ಎಷ್ಟರಮಟ್ಟಿಗೆ ಸರಿಯಾಗುತ್ತದೆ ಎನ್ನುವುದರ ಬಗ್ಗೆ ನನ್ನ ಅನುಮಾನ ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಅಧ್ಯಕ್ಷರಾಗಿರುವವರಿಗೆ ನಮ್ಮ ಸ್ನೇಹಿತರಾಗಿರತಕ್ಕಂಥ ವೈ.ಕೆ.ರಾಮಯ್ಯನವರು ಹೇಳಿದಂತೆ ಇನ್ನೊಬ್ಬರಿಗೆ ಅಧಿಕಾರವನ್ನು ಕೊಡತಕ್ಕಂಥ ಅವಕಾಶವನ್ನು ಇದರಲ್ಲಿ ತೋರಿಸಿದ್ದೀರಿ, ಇನ್ನೊಬ್ಬ ಶಾಸಕರಿಗೆ ಒಂದು ಅಧಿಕಾರವನ್ನು ಕೊಡುವ ಅವಕಾಶ ಒದಗಿಸಿಕೊಟ್ಟಿದೆ. ಅಷ್ಟೇ ವಿನಹ ಮತ್ತೇನೂ ಕೂಡ ಇಲ್ಲ ಎಂದು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನನಗೂ ಕೂಡ ಹಾಗೆಯೇ ಅನಿಸುತ್ತದೆ. ಅವರಿಗೆ ಏನೂ ಅಧಿಕಾರವಿಲ್ಲ. ಒಂದು ಮಂಡಲಿ, ಆ ಮಂಡಲಿಗೆ ಒಬ್ಬ ಅಧ್ಯಕ್ಷ, ಅಧ್ಯಕ್ಷರಿಗೆ ಒಂದು ಗೂಟಡ ಕಾರ್, ಅಷ್ಟಕ್ಕೆ ಸೀಮಿತವಾಗಿರುವುದನ್ನು ನಾನು ಬಹಳವಾಗಿ ಮಲೆನಾಡು ಅಭಿವೃದ್ಧಿ ಮಂಡಲಿಯ ಕಾನೂನಿನಲ್ಲಿ ಕೂಡ ನೋಡಿದೆ. ಅದರಲ್ಲೂ ಕೂಡ ಇದೇ ರೀತಿಯ ಒಂದು ಅವಕಾಶವನ್ನು ಒದಗಿಸಿದೆ. ಇದು ಸರಿ ಇಲ್ಲ ಎಂದು ನನ್ನ ಭಾವನೆ. ಅಧಿಕಾರೇತರರಿಗೆ ತಾವು ಅಧಿಕಾರವನ್ನು ಕೊಡದೆ ಅಧಿಕಾರಿಗಳ ಕೈಗೆ ಅಧಿಕಾರವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ನಡೆಸಿದ್ದೀರಿ. ಇದು ಸರಿಯಲ್ಲ. ಇದು ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇದಕ್ಕೆ ಈಗ ತಾವು ತಿದ್ದುಪಡಿ ತನ್ನಿ, ಅಧ್ಯಕ್ಷರಾಗಿರುವವರಿಗೆ ಅಧಿಕಾರಿ ಕೊಡಿ ಎಂದು ಹೇಳಿದರೆ ಕೊನೆಯ ದಿವಸ ಅವರು ತಿದ್ದುಪಡಿ ತರುವುದಿಲ್ಲ. ಅದು ಆಗುವುದೂ ಅಲ್ಲ. ಅದು ಆಗದೇ ಇರತಕ್ಕಂಥ ಮಾತು. ಆದರೆ ನನಗೆ ತೋಚಿದ್ದನ್ನು ಹೇಳುತ್ತಿದ್ದೇನೆ. ಅಧ್ಯಕ್ಷರಾಗಿರುವವರಿಗೆ ಏನೂ ಅಧಿಕಾರ ಕೊಟ್ಟಿಲ್ಲ ಎನ್ನುವ ಮಾತನ್ನು ಅದು ಕಡತದಲ್ಲಿ ಇರಬೇಕು ಎನ್ನುವ ಕಾರಣಕ್ಕೋಸ್ಕರ ಈ ಸಂದರ್ಭದಲ್ಲಿ ನಾನು ಹೇಳಿ ಮತ್ತೊಮ್ಮೆ ಇಂಥ ಒಳ್ಳೆಯ ಕೆಲಸ ಮಾಡಿರತಕ್ಕಂಥದ್ದಕ್ಕೆ ಸರ್ಕಾರವನ್ನು ಮೊದಲು ಮುಖ್ಯವಾಗಿ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ ಅನೇಕ ಸಾರಿ ಅವರು ಹೇಳಿದ್ದರು. ಅದರಂತೆ ಕೊನೆಯಲ್ಲಾದರೂ ಬರುತ್ತಿದೆಯಲ್ಲಾ ಎನ್ನತಕ್ಕಂಥ ಒಂದು ಸಂತೋಷವನ್ನು ವ್ಯಕ್ತಪಡಿಸಿ ತಮಗೂ ಕೂಡ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ .ಎಲ್.ಆರ್.ಶಿವರಾಮೇಗೌಡ (ನಾಗಮಂಗಲ) :- ಮಾನ್ಯ ಅಧ್ಯಕ್ಷರೇ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕವನ್ನು ಕೃಷಿ ಸಚಿವರು ಮಂಡಿಸಿರುವುದಕ್ಕೆ ನಾನೂ ಸಹ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ನಮ್ಮ ಕ್ಷೇತ್ರದ

ಭಾಗದಲ್ಲಿ ಬಹಳ ದಿವಸಗಳಿಂದ ನೀರಾವರಿ ಇಲ್ಲದೆ, ಮಳೆಯೂ ಸಹ ಬೀಳದಿರುವ ಬಯಲು ಪ್ರದೇಶವನ್ನು ಅಭಿವೃದ್ಧಿ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಹೇಳಿದಾಗ ಕೊನೆಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರು ಕಳೆದ ಬಜೆಟ್‌ನಲ್ಲಿ ಇದನ್ನು ಮಾಡುತ್ತೇವೆಂದು ಪ್ರಕಟಿಸಿ ಇವ್ಹೊತ್ತು ಅದರ ಮಸೂದೆ ತಂದಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ನಾಗಮಂಗಲ ತಾಲ್ಲೂಕಿನಲ್ಲಿ ಇವ್ಹೊತ್ತು ಶೇಕಡ 30 ರಷ್ಟು ನೀರಾವರಿಯಾಗುತ್ತದೆಂದು ಅಂಕಿ ಅಂಶಗಳ ಆಧಾರದ ಮೇಲೆ ತಿಳಿಸಿದ್ದು ಅದರಂತೆ ನಾಗಮಂಗಲ ಮತ್ತು ಕೆ.ಆರ್.ಪೇಟೆ ತಾಲ್ಲೂಕನ್ನು ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸಿಲ್ಲ. ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವವುಂಟಾಗಿ, ಕೆಲಸವಿಲ್ಲದೆ ಕೃಷಿ ಕಾರ್ಮಿಕರು ವಲಸೆ ಹೋಗುತ್ತಿದ್ದಾರೆ. ನಾಗಮಂಗಲ ತಾಲ್ಲೂಕಿನಲ್ಲಿ ಶೇಕಡ 30 ರಷ್ಟು ನೀರಾವರಿಯಾಗುತ್ತದೆಂದು ಅದಕ್ಕಾಗಿ ಆ ತಾಲ್ಲೂಕನ್ನು ಸದರಿ ಮಂಡಳಿ ವ್ಯಾಪ್ತಿಗೆ ಸೇರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾದುದೇನೆಂದರೆ, ನಿಮ್ಮ ಲೆಕ್ಕಾಚಾರದ ಪ್ರಕಾರ ಶೇಕಡ 30 ರಷ್ಟು ಎಂದು ಏನು ಇದೆ, ಅದು ಸಂಪೂರ್ಣವಾದ ನಂತರ ಬೇಕಾದರೆ ನೀವು ಮಂಡಲಿ ವ್ಯಾಪ್ತಿಯಿಂದ ತೆಗೆಯಿರಿ. ಅಲ್ಲಿಯವರೆವಿಗೂ ಈ ಒಂದು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಮೇಲಿನ ಎರಡು ತಾಲ್ಲೂಕುಗಳನ್ನು ಸೇರಿಸಬೇಕೆಂದು ಸನ್ಮಾನ್ಯ ಸಭಾಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೈ.ಕೆ.ರಾಮಯ್ಯ :- ಈ ಸದರಿ ಪ್ರಾಧಿಕಾರಕ್ಕೆ ಈ ವರ್ಷದ ಆಯ-ವ್ಯಯದಲ್ಲಿ ಏನಾದರೂ ಹಣ ಇಟ್ಟಿದ್ದೀರಾ? ಇಟ್ಟಿದ್ದರೆ ಎಷ್ಟು ಹಣ ಇಟ್ಟಿದ್ದೀರೆಂಬುದನ್ನು ದಯಮಾಡಿ ತಿಳಿಸಬೇಕು. ಅದು ಮುಖ್ಯ.

* ಶ್ರೀ ಜಿ.ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) :- ಮಾನ್ಯ ಅಧ್ಯಕ್ಷರೇ ಬಹಳಷ್ಟು ಜನ ವಿರೋಧ ಪಕ್ಷಗಳ ನಾಯಕರು ಈ ವಿಧೇಯಕವನ್ನು ಮನಃಪೂರ್ವಕವಾಗಿ, ಸಮರ್ಪಣಾ ಭಾವದಿಂದ ಸ್ವಾಗತಿಸಿದ್ದಾರೆ. ಇದಕ್ಕಾಗಿ ಮಂತ್ರಿಗಳನ್ನು, ನಮ್ಮ ಸರ್ಕಾರವನ್ನು ಮೆಚ್ಚಿಕೊಂಡಿದ್ದಾರೆ. ಆದುದರಿಂದ, ಸದರಿ ಮಸೂದೆಯನ್ನು ನಾನೂ ಕೂಡ ಅನುಮೋದಿಸುತ್ತೇನೆ. ಇದರ ಬಗ್ಗೆ ನನ್ನ ಅಭಿಪ್ರಾಯ ತಿಳಿಸಬೇಕೆಂದರೆ, ಈ ಒಂದು ವಿಧೇಯಕವನ್ನು ತರತಕ್ಕಂಥ ಭರದಲ್ಲಿ ನಮ್ಮ ಸರ್ಕಾರದವರು ಸದರಿ ವಿಧೇಯಕವನ್ನು ವೈಜ್ಞಾನಿಕ ರೀತಿಯಲ್ಲಿ ಸಿದ್ಧಪಡಿಸಿಲ್ಲ, ರಾಜ್ಯದ ಅಸಮತೋಲನವನ್ನು ಹೋಗಲಾಡಿಸುವ ಹಿನ್ನೆಲೆಯಲ್ಲಿ ಇದನ್ನು ಸಿದ್ಧಪಡಿಸಲಿಲ್ಲ. ಕಛೇರಿಯಲ್ಲಿ ಕುಳಿತುಕೊಂಡು ಗುಮಾಸ್ತರು ತಯಾರು ಮಾಡಿರುವ ವಿಧೇಯಕ ಇದೆಂದು ನಾನಾದರೂ ಹೇಳಬೇಕಾಗುತ್ತದೆ. ಮಂಡಳಿ ವ್ಯಾಪ್ತಿಗೆ ಸೇರಿಸಲು ಆ ಪ್ರದೇಶದಲ್ಲಿ ಶೇಕಡ 10 ಕ್ಕಿಂತ ಕಡಿಮೆ ಮಳೆಯಾಗಬೇಕು ಮತ್ತು ಶೇಕಡ 30 ರಷ್ಟು ನೀರಾವರಿಯಾಗಿರಬೇಕೆಂದು ಕೃಷಿ ಮಂತ್ರಿಗಳು ಹೇಳಿದರು. ತಮಗೆ ಈ ಕುರಿತು ಹೇಳುವುದಾದರೆ, ಹೊಳೆನರಸೀಪುರ, ಕೆ.ಆರ್.ಪೇಟೆ, ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ 10 ಅಂಗುಲ ಮಳೆ ಕೂಡ ಬೀಳುವುದಿಲ್ಲ. ಇದರ ವಿವರ ಅವರ ಅಂಕಿ-ಅಂಶಗಳಲ್ಲಿದೆ. ನೀರಾವರಿ ಶೇಕಡ 30 ರಷ್ಟು ಹೇಳಿದ್ದು ಅವರ ಅಂಕಿ-

ಅಂಶದಲ್ಲಿ ಶೇಕಡ 18 ರಷ್ಟಿದೆ. ಮುಂದೆ ಆಗತಕ್ಕಂಥಾದ್ದನ್ನು ಲೆಕ್ಕ ಹಾಕಿ ಕೈಬಿಡಲಾಯಿತೆಂದು ಹೇಳುತ್ತಾರೆ. ಈ ರೀತಿ ಅವರು ಹೇಳುವುದಾದರೆ ಇದು ಬಹು ಃ ಕೈ ತಪ್ಪಿನಿಂದ ಆಗಿರಬೇಕು ಇಲ್ಲವೇ ಯಾವುದಾದರೂ ವೈಯಕ್ತಿಕ ಭಾವನೆಯಿಟ್ಟುಕೊಂಡು ಈ ಕೃತ್ಯವಾಗಿರಬೇಕೆಂಬ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ. ರಾಜ್ಯದ ಎಲ್ಲಾ ತಾಲ್ಲೂಕುಗಳನ್ನು ಒಂದಲ್ಲ ಒಂದು ಯೋಜನೆಯ ವ್ಯಾಪ್ತಿಗೆ ಸೇರಿಸುವ ಪ್ರಯತ್ನ ನಡೆದಿದೆ. ಅಲ್ಲದೆ, ಹಾಸನ ಮತ್ತು ಗಂಡಿಸಿ ತಾಲ್ಲೂಕುಗಳನ್ನು ಮಲೆನಾಡು ಅಭಿವೃದ್ಧಿ ಯೋಜನೆಗೆ ಸೇರಿಸುವ ಮಟ್ಟಕ್ಕೆ ಪ್ರಯತ್ನ ನಡೆದಿದೆ. ಇದಲ್ಲದೆ ಇದರ ಜೊತೆಗೆ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳನ್ನು ಮತ್ತು ಗಡಿನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಇತರ ಎಲ್ಲಾ ಪ್ರದೇಶಗಳನ್ನು ಸೇರಿಸುವ ಪ್ರಯತ್ನ ಸಾಗಿದೆ. ಹಾಗಿದ್ದರೆ ಇನ್ನುಳಿದ 3-4 ತಾಲ್ಲೂಕುಗಳ ಜನರು ಏನು ಅನ್ಯಾಯ ಮಾಡಿದ್ದರು? ಮುಂದೆ ನೀರಾವರಿ ಪ್ರದೇಶ ಬಂದ್ ಆಗುವ ಅವಕಾಶವಿರುವುದರಿಂದ ಇದನ್ನು ಕೈಬಿಟ್ಟಿದ್ದೇವೆಂದು ಹೇಳಿದ್ದೀರಿ. ನೀರಾವರಿ ಪ್ರದೇಶ ಆಗುವುದು ಯಾವಾಗ? ನಿಮಗೆ ಕಾವೇರಿ ನೀರು ಇನ್ನೂ ತೂಗುಗತ್ತಿ! ಇದನ್ನು ಯೋಜನೇತರ ಅಡಿಯಲ್ಲಿ ತೆಗೆದುಕೊಂಡಿರುವುದು; ಇದಕ್ಕೆ ನೀವು ಹಣ ಒದಗಿಸಲು ಸಾಧ್ಯವಾಗುವುದಿಲ್ಲ. 4-5 ತಾಲ್ಲೂಕುಗಳನ್ನು ಮಾತ್ರ ಬಿಟ್ಟು ಬೇರೆ ತಾಲ್ಲೂಕುಗಳನ್ನು ಸೇರಿಸಿ ಇದನ್ನು ಮಾಡಿದ್ದರೂ ಸಹ ವಿರೋಧ ಪಕ್ಷದ ನಾಯಕರು ಸ್ವಾಗತಿಸುತ್ತಾರೆಂದು ಇದನ್ನು ತಾವು ಒಪ್ಪಿಕೊಳ್ಳುವುದಾದರೆ, ಮೊದಲು ನ್ಯೂನತೆಯನ್ನು ಸರಿಪಡಿಸಿ ಒಪ್ಪಿಕೊಳ್ಳಿ ಎಂಬ ಒಂದು ಮನವಿಯನ್ನು ತಮ್ಮ ಮೂಲಕ ನಮ್ಮ ರಾಜ್ಯ ಸರ್ಕಾರಕ್ಕೆ ಮಾಡುತ್ತಿದ್ದೇನೆ. ದಯಮಾಡಿ ಇದರ ಬಗ್ಗೆ ಯಾವುದೇ ರಾಜಕೀಯ ಬೆರೆಸತಕ್ಕಂಥಾದ್ದು ಸರಿಯಲ್ಲ. ಇದನ್ನು ಮಾಡುತ್ತಿರುವುದು ಬಯಲುಸೀಮೆ ಅಭಿವೃದ್ಧಿಗೋಸ್ಕರವಾಗಿ. ಬಯಲುಸೀಮೆಯನ್ನು ಅಭಿವೃದ್ಧಿಪಡಿಸುತ್ತಿರುವ ಸಂದರ್ಭದಲ್ಲಿ, ಇದಕ್ಕೆ ನಿಗದಿಪಡಿಸಿದ ಹಣವನ್ನು ಖರ್ಚು ಮಾಡಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ತಾರತಮ್ಯ ಮಾಡತಕ್ಕಂಥಾದ್ದೂ ಸರಿಯಲ್ಲ. ಆದುದರಿಂದ, ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರು ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮೇಲೆ ತಿಳಿಸಿದ ತಾಲ್ಲೂಕುಗಳನ್ನು ಸೇರಿಸಬೇಕು. ಏಕೆಂದರೆ, ಅವರು ಒದಗಿಸಿರುವ ಅಂಕಿ-ಅಂಶಗಳಲ್ಲೇ ಇದೆ. ಏನೆಂದರೆ, ಶೇಕಡ 10ರಷ್ಟು ನೀರಾವರಿಯಾಗಿಲ್ಲ, ಅದೇ ರೀತಿ ಶೇಕಡ 10 ರಷ್ಟು ಮಳೆ ಬರುತ್ತದಾದ್ದರಿಂದ ಹೊಳೆನರಸೀಪುರ ತಾಲ್ಲೂಕನ್ನು ಬಿಡಲಾಗಿದೆಯೆಂದು ಹೇಳುತ್ತಾರೆ. ಒಂದೇ ಒಂದು ಹೋಬಳಿಗೆ ಮಾತ್ರ ನೀರಾವರಿಯಾಗುತ್ತಿದ್ದು, ಉಳಿದ ನಾಲ್ಕು ಹೋಬಳಿಗಳಿಗೆ ನೀರಾವರಿಯಾಗುವುದಿಲ್ಲ. ನಾಲೆಗಳು ಅಲ್ಲಿಯವರೆಗೆ ಹೋಗಿಲ್ಲವಾದ್ದರಿಂದ ಆ ಹೋಬಳಿಗಳ ಗತಿ ಏನಾಗುತ್ತದೆಂದು ಯೋಚಿಸಬೇಕು. ಅವೆಲ್ಲಾ ಮಳೆ ನೆರಳಿನ ಪ್ರದೇಶಗಳು. ರಾಜಮಹಾರಾಜರ ಕಾಲದಿಂದ ಗಂಜಿ ಕೇಂದ್ರಗಳನ್ನು ಆರಂಭಿಸಿಕೊಂಡು ಬಂದಿರುವವರು ನಾವು. ಅಂತಹ ಪ್ರದೇಶವನ್ನು 'ಬರಪೀಡಿತ ಪ್ರದೇಶ' ವೆಂದು ವಿಧಾನಮಂಡಲದಲ್ಲೂ ಕೂಡ ಘೋಷಣೆ ಮಾಡಬೇಕೆಂದು ತೀರ್ಮಾನವಾಗಿರುವ ಹಿನ್ನೆಲೆಯಲ್ಲಿ ಆ ಪ್ರದೇಶಗಳನ್ನು ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಿಂದ

ಹೊರತುಪಡಿಸುವುದಾದರೆ ನಿಜಕ್ಕೂ ಅನ್ಯಾಯವೆಸಗಿದಂತಾಗುತ್ತದೆ. ಹಾಗೂ ಆ ಭಾಗದ ಜನತೆಗೆ ಬಹಳ ತೊಂದರೆಯಾದಂತಾಗುತ್ತದೆ. ದಯಮಾಡಿ ವ್ಯವಸಾಯ ಮಂತ್ರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಅದನ್ನು ತಿದ್ದುಪಡಿ ಮಾಡಿ. ಈ ಒಂದು ವಿಧೇಯಕಕ್ಕೆ ಆ ಒಂದು ಗ್ರಾಮಗಳನ್ನು ಸಹ ಸೇರಿಸಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ಎನ್ನತಕ್ಕ ಒಂದೇ ಒಂದು ತಾಲ್ಲೂಕನ್ನು ಸೇರಿಸಿದ್ದಾರೆ. ಅಲ್ಲಿ ಇನ್ನೂ ಮೂರು ತಾಲ್ಲೂಕುಗಳಿವೆ. ಆ ತಾಲ್ಲೂಕುಗಳಿಗೆ ಅನ್ಯಾಯ ಮಾಡುವುದು ಬೇಡ. ಇಲ್ಲದಿದ್ದರೆ ನಾವು ಆ ಭಾಗದ ಜನತೆಗೆ ತಾರತಮ್ಯ ಮಾಡಿದಂತಾಗುತ್ತದೆ. ಆ ಒಂದು ಅಪಕೀರ್ತಿ ನಮ್ಮ ಸರ್ಕಾರಕ್ಕೆ ಬರುವುದು ಬೇಡ ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ಹೇಳಿ ಮತ್ತೊಮ್ಮೆ ಅವರನ್ನು ಒತ್ತಾಯ ಪೂರ್ವಕವಾಗಿ ವಿನಂತಿ ಮಾಡುತ್ತ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಎ. ನಾಗರಾಜ್ (ಮಾಲೂರು):- ಸನ್ಮಾನ್ಯ ಅಧ್ಯಕ್ಷರೇ, ಈ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕವನ್ನು ಸನ್ಮಾನ್ಯ ವ್ಯವಸಾಯ ಮಂತ್ರಿಗಳು ಇಲ್ಲಿ ಮಂಡಿಸಿದ್ದಾರೆ, ಈ ಬಯಲು ಸೀಮೆ ಪ್ರದೇಶದ ಜನರು ಈ ಮಸೂದೆ ಬರಬೇಕು, ಅದರ ಮೂಲಕ ಬಯಲು ಸೀಮೆ ಅಭಿವೃದ್ಧಿಯಾಗಿ ಅಲ್ಲಿಯ ಜನರ ಆರ್ಥಿಕ ಮಟ್ಟ ಮೇಲಕ್ಕೆ ಹೋಗಬೇಕೆಂದು ಬಹಳ ನಿರೀಕ್ಷೆಣೆಯಲ್ಲಿದ್ದರು. ಈ ನಿರೀಕ್ಷೆಣೆ ಇವತ್ತು ಸತ್ಯವಾಗಿದೆ. ಆ ಜನರ ಪರವಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ, ಈ ಮಸೂದೆಯಲ್ಲಿ ಕೆಲವು ನ್ಯೂನತೆಗಳು ಕಂಡುಬರುತ್ತಿದೆ. ಆ ನ್ಯೂನತೆಗಳನ್ನು ಈ ಸಭೆಯ ಮೂಲಕ ಸನ್ಮಾನ್ಯ ಕೃಷಿ ಸಚಿವರಲ್ಲಿ ತರಲು ಇಚ್ಛಿಪಡುತ್ತೇನೆ. ಮತ್ತು ಈ ನ್ಯೂನತೆಗಳೇನಿವೆ ಇದು ಬಹಳ ಗಂಭೀರವಾದಂಥ ನ್ಯೂನತೆಗಳು. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ಕೊಡುವಾಗ ಇವುಗಳನ್ನೆಲ್ಲಾ ಸೇರಿಸಿ ಉತ್ತರವನ್ನು ಕೊಟ್ಟರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಈ ಪ್ರಾಧಿಕಾರದ ಕೇಂದ್ರ ಸ್ಥಾನವನ್ನಾಗಿ ಚಿತ್ರದುರ್ಗವನ್ನು ಮಾಡಿದ್ದಾರೆ. ಇದರಲ್ಲಿ ಏನು 56 ತಾಲ್ಲೂಕುಗಳಿವೆ ಇದರಲ್ಲಿ 36 ತಾಲ್ಲೂಕುಗಳು ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳಿಗೆ ಸೇರಿದೆ. ಆದ್ದರಿಂದ ಈ ಪ್ರಾಧಿಕಾರದ ಕೇಂದ್ರ ಸ್ಥಳವನ್ನು ಬೆಂಗಳೂರಿಗೆ ಸ್ಥಳಾಂತರ ಮಾಡಿದರೆ ಒಳ್ಳೆಯದು. ಮತ್ತು ಈ ಒಂದು ಪ್ರಾಧಿಕಾರದಲ್ಲಿ ಕೋಲಾರದ ಗೌರಿಬಿದನೂರನ್ನು ಬಿಟ್ಟಿದ್ದಾರೆ, ಆದರೆ ಪಕ್ಕದಲ್ಲಿರುವ ದೇವನಹಳ್ಳಿ ಚಿಕ್ಕಬಳ್ಳಾಪುರ, ಕೊರಟಿಗೆರೆನ್ನು ಸೇರಿಸಿದ್ದಾರೆ, ದೊಡ್ಡಬಳ್ಳಾಪುರವನ್ನು ಸೇರಿಸಿದ್ದಾರೆ, ಆದರೆ ಮಧ್ಯದಲ್ಲಿರತಕ್ಕ ಗೌರಿಬಿದನೂರು ತಾಲ್ಲೂಕನ್ನು ಬಿಟ್ಟಿದ್ದಾರೆ. ಅದನ್ನು ಯಾವ ವೈಜ್ಞಾನಿಕ ಅಧಾರದ ಮೇಲೆ ಬಿಟ್ಟಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಅಲ್ಲಿ ಯಾವ ನಾಲೆಗಳೂ ಸಹ ಇಲ್ಲ. ಆದರ ಪಕ್ಕದಲ್ಲೇನು ತಾಲ್ಲೂಕುಗಳಿವೆ. ಆ ತಾಲ್ಲೂಕುಗಳ ವಾತಾವರಣವೇ ಇಲ್ಲೂ ಸಹ ಇದೆ. ಮಳೆ ಸಹ ಹೆಚ್ಚು ಬೀಳವುದಿಲ್ಲ. ಆದ್ದರಿಂದ ಗೌರಿಬಿದನೂರು ತಾಲ್ಲೂಕನ್ನು ಸಹ ಸೇರಿಸಿಕೊಂಡು ಉತ್ತರವನ್ನು ಕೊಡಬೇಕಾಗುತ್ತದೆ. ಮತ್ತು ನೀವು 20 ಜನರು ಕೋರಂ ಇರಬೇಕೆಂದು ಹೇಳಿದ್ದೀರಿ. ದಯವಿಟ್ಟು ಯಾವುದೇ ಒಂದು

ವಿದೇಯಕದಲ್ಲಾಗಲಿ, ಸಂಘ ಸಂಸ್ಥೆಗಳಲ್ಲಾಗಲಿ ಸದಸ್ಯರ ಬಗ್ಗೆ ಕೋರಂನ ಪ್ರಶ್ನೆ ಬರುವುದಿಲ್ಲ. ಆದ್ದರಿಂದ 1/3 ಎಂದು ಹೇಳಿ, 1/4 ಅಥವಾ 1/5 ಎಂದು ಹೇಳಿ. ಇದೊಂದು ದೊಡ್ಡ ನ್ಯೂನತೆ ಇದೆ. ಮತ್ತು ಇದರಲ್ಲೇನು ಉದ್ದೇಶಗಳ ಬಗ್ಗೆ ಹೇಳಿದ್ದೀರಿ ; ಅದರ ಬಗ್ಗೆ ಗಹನವಾಗಿ ಯೋಚನೆ ಮಾಡಿದರೆ ನಿಜವಾಗಿಯೂ ಇದೊಂದು ದೊಡ್ಡ ಸಾಯಿಲ್ ಕನ್‌ಸರ್‌ವೇಷನ್ ಇಲಾಖೆಯಾಗಿ ಪರಿವರ್ತನೆಯಾಗುತ್ತದೆ. ಸಾಯಿಲ್ ಕನ್‌ಸರ್‌ವೇಷನ್ ಇಲಾಖೆಯು ಏನು ಕೆಲಸ ಮಾಡುತ್ತಿದೆ, ಆದರ ಪ್ರತಿಫಲ ರೈತರಿಗೆ, ಜನತೆಗೆ ಸರಿಯಾಗಿ ಸೇರುತ್ತಿದೆಯೇ ಎಂಬ ಬಗ್ಗೆ ಮೂಲಭೂತವಾಗಿ ಚಿಂತನೆ ಮಾಡಬೇಕಾಗುತ್ತದೆ. ಆದ್ದರಿಂದ ಇಲ್ಲಿ ಕೇವಲ ಸಾಯಿಲ್ ಕನ್‌ಸರ್‌ವೇಷನ್‌ನ್ನು ಗಮನದಲ್ಲಿಟ್ಟು ಕೊಂಡು ಈ ಮಸೂದೆಯನ್ನು ತಂದಿರುವುದರಿಂದ ಈ ಮಸೂದೆಯಲ್ಲಿರುವ ಉದ್ದೇಶಗಳನ್ನು ಸಹ ಬದಲಾವಣೆ ಮಾಡಬೇಕಾಗುತ್ತದೆ. – ಇಲ್ಲಿ ಸಂಪೂರ್ಣವಾದಂಥ ಅಭಿವೃದ್ಧಿಯಾಗಬೇಕು. ಅಲ್ಲಿನ ನೀರು ಸರಬರಾಜಿನ ವ್ಯವಸ್ಥೆ ಇದರಲ್ಲಿ ಸೇರಿಸಬೇಕು, ರಸ್ತೆಗಳು, ಕಟ್ಟಡಗಳು, ಇದರಲ್ಲಿ ಸೇರಬೇಕಾಗುತ್ತದೆ ; ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾಗುತ್ತದೆ ; ಆ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಅನುಗುಣವಾಗಿ ಇದರಲ್ಲಿರುವ ಆ ಉದ್ದೇಶಗಳನ್ನು ಮಾರ್ಪಾಡು ಮಾಡಿ ಇದಕ್ಕೆ ಉತ್ತರವನ್ನು ಕೊಟ್ಟರೆ ಬಹಳ ಒಳ್ಳೆಯದೆಂದು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಭಿನ್ನವಿಸಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ :- (ಕೃಷಿ ಸಚಿವರು):- ಸನ್ಮಾನ್ಯ ಅಧ್ಯಕರೇ, ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಇದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣವನ್ನು ಒದಗಿಸಿದ್ದಾರೆಂದು ಕೇಳಿದ್ದಾರೆ. ಅದರ ಬಗ್ಗೆ ಹೇಳುವುದಾದರೆ ಈ ಸಲದ ನಮ್ಮ ಬಜೆಟ್‌ನಲ್ಲಿ ಇದಕ್ಕೆ 30 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಈ ರೀತಿಯಾದರೆ ಇದು ಸರಿಯಾಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾವು ರಾಜಕೀಯ ನಡೆದಿದೆ ಎಂದು ಹೇಳಲಿಲ್ಲ. ನಮಗೆ ಅನ್ಯಾಯವಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ:- ಸಂಸದೀಯ ನಡವಳಿಕೆಗೆ ಕಾಂಗ್ರೆಸ್‌ನಿಂದ ವಿರೋಧವಾಗುತ್ತಿದೆ.

ಮಂತ್ರಿಗಳು ಮಾತನಾಡಲಿ .....

(ಗೊಂದಲ)

ಶ್ರೀ. ಸಿ. ಬೈರೇಗೌಡ :- ಸದನ ಸರಿಯಾಗಿ, ಗೌರವಯುತವಾಗಿ ನಡೆಯುತ್ತಿಲ್ಲವೆಂದು ಸದಸ್ಯರು ಹೇಳಿದರೆ .....

(ಗೊಂದಲ)

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ ''1994ರ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ರಿಂದ 29ರವರೆಗೆ :- ಅಧ್ಯಕ್ಷರು :- ಪ್ರಸ್ತಾವ ಏನೆಂದರೆ ''ಖಂಡ 2 ರಿಂದ 29ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 2 ರಿಂದ 29 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ:-

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಆಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಎಂ. ರೇವಣ್ಣ :- (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ''1994ನೇ ಸಾಲಿನ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿದೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''1994ನೇ ಸಾಲಿನ ಬಯಲುಸೀಮೆ ಪ್ರದೇಶಾಭಿವೃದ್ಧಿ ವಿದೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಮುಂಜಾನೆಯಿಂದ ನಾವು ಕುಳಿತಿದ್ದೇವೆ. ನಮ್ಮ ಬಿಸಿನೆಸ್ ತೆಗೆದುಕೊಳ್ಳಿ. ಏನಿದು ? ಒಂದೂ ಅರ್ಥವಾಗುತ್ತಿಲ್ಲ. ನಮಗೆ ಗೌರವ ಇದೆಯೋ ಇಲ್ಲವೋ ಹೇಳಿಬಿಡಿ. ಬೇಡವೆಂದರೆ ಹೇಳಿಬಿಡಿ ನಾವು ಎಷ್ಟು ಸಲ ಹೇಳಭೇಕು. ಎರಡು ಬಿಲ್ ಅಲ್ಲ, 6 ಬಿಲ್ ಪಾಸ್ ಮಾಡಿಕೊಳ್ಳಿ. ರಾತ್ರಿ 10 ಗಂಟೆಯವರೆಗೂ ಬೇಕಾದರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ರಾತ್ರಿ 12 ಗಂಟೆಯವರೆಗೂ ಬೇಕಾದರೆ ಕುಳಿತುಕೊಳ್ಳುತ್ತೇವೆ. ಈಗ ಹೇಳಿಕೆ ಕೊಡಲಿ.

ಅಧ್ಯಕ್ಷರು :- ಈಗ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 1994ನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ವಿ. ದೇಶಪಾಂಡೆ :- ಇಲ್ಲ, ತಾವು ಅದನ್ನು ಈಗ ತೆಗೆದುಕೊಳ್ಳಬಾರದು. 2 ಬಿಲ್ ಅಲ್ಲ 5 ಬಿಲ್ ಪಾಸ್ ಮಾಡಿ. ಈಗ ಶ್ರೀ ಗೋಪಿನಾಥ್ ಸಾಂದ್ರರವರು ಇದ್ದಾರೆ ಅವರ ಬಗ್ಗೆ ಮುಗಿಯಲಿ. ಶ್ರೀ ವಾಟಾಳ್ ನಾಗಾರಾಜ್‌ರವರದು ಒಂದು ಇದೆ. ಅದನ್ನು ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಗೃಹ ಮಂತ್ರಿಯವರಿದ್ದಾರೆ. ಅವರಿಂದ ನನಗೆ ಹೇಳಿಕೆ ಬರಲಿ.

ಶ್ರೀ ಆರ್. ವಿ. ದೇಶಪಾಂಡೆ :- ತಾವು ಮಾನ್ಯ ಮುಖ್ಯಮಂತ್ರಿಯವರನ್ನು ಕರೆಯಿಸಬೇಕು. ನಾವು ಎಷ್ಟು ಹೊತ್ತು ಕುಳಿತುಕೊಳ್ಳಬೇಕು ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಮುಖ್ಯಮಂತ್ರಿಯವರು ಬರುತ್ತಾರೆ. ಅವರು ಬರುವುದರೊಳಗೆ ....

ಅಧ್ಯಕ್ಷರು :- ಇಲ್ಲಿ ಎಲ್ಲರೂ ಶಾಂತತೆಯನ್ನು ಕಾಯ್ದುಕೊಳ್ಳಬೇಕು, ಮತ್ತು ಸಭೆಯಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಿ. ಈಗ ವಿಧೇಯಕವನ್ನು ತೆಗೆದುಕೊಳ್ಳೋಣ.

(2) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 1994 ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಬಿ.ಶಿವಣ್ಣ : (ವೈದ್ಯಕೀಯ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 1994ನ್ನು ಪರ್ಯಾ ಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :- ಹೌಸ್ ಅಡ್ಜರ್ನ್ ಮಾಡಿ, ಮನೆಗೆ ಹೋಗಿಬಿಡೋಣ. ಮುಖ್ಯ ಮಂತ್ರಿಗಳು ಸಭೆಗೆ ಬರುವುದಿಲ್ಲ ಎಂದರೆ ಹೇಗೆ, ಸರ್ಕಾರ ಹೇಳಿದ ಪ್ರಕಾರ ಬಿಸಿನೆಸ್ ಆಗಬೇಕಾಗುತ್ತದೆ. ನಾವು ಏತಕ್ಕೆ ಇಲ್ಲಿ ಕುಳಿತುಕೊಳ್ಳಬೇಕು, ನಮಗೆ ಏನು ಅವಶ್ಯಕತೆ ಇದೆ.

(ಗೊಂದಲ)